# ಎನ್‌ಐಟಿಕೆಯಲ್ಲಿ 132 ಕೋಟಿ ರೂ. ವೆಚ್ಚದ ಹಾಸ್ಟೆಲ್ ಕಟ್ಟಡ ಉದ್ಘಾಟನೆ

**ವಿಕ ಸುದ್ದಿಲೋಕ** ಸುರತ್ಕಲ್

ಎನ್‌ಐಟಿಕೆಯಲ್ಲಿ 132 ಕೋಟಿ ವೆಚ್ಚದ ಬ್ರಹ್ಮಗಿರಿ, ಗೋದಾವರಿ, ಶಿವಾಲಿ ಎಂಬ ಮೂರು ಹಾಸ್ಟೆಲ್‌ಗಳನ್ನು ಪ್ರಧಾನಿ ನರೇಂದ್ರ ಮೋದಿ ಮಂಗಳವಾರ ವರ್ಚುವಲ್ ಮೂಲಕ ಲೋಕಾರ್ಪಣೆಗೊಳಿಸಿದರು.

ಸುರತ್ಕಲ್ ಎನ್‌ಐಟಿಕೆ ಆವರಣದಲ್ಲಿ ನಡೆದ ಸಮಾರಂಭದಲ್ಲಿ ಸಂಸದ ನಳಿನ್ ಕುಮಾರ್ ಕಟೀಲು ಮಾತನಾಡಿ, ಎನ್‌ಐಟಿಕೆ ಪ್ರಗತಿಗೆ ಮಲ್ಯರ ದೂರದೃಷ್ಟಿತ್ವ ಕಾರಣ. ದೇಶದ 12 ಎನ್‌ಐಟಿಗಳಲ್ಲಿ ಎನ್‌ಐಟಿಕೆ ಮೊದಲ ಸ್ಥಾನದಲ್ಲಿದೆ. ಹೊಸ ಹಾಸ್ಟೆಲ್‌ಗಳಿಂದ 1527 ವಿದ್ಯಾರ್ಥಿಗಳಿಗೆ ಅನುಕೂಲವಾಗಲಿದೆ. ದೇಶದ ಶೈಕ್ಷಣಿಕ ರಂಗದಲ್ಲಿ ಆಗುತ್ತಿರುವ ಪರಿವರ್ತನೆ ಎನ್‌ಐಟಿಕೆಯಲ್ಲಿಯೂ ಆಗುತ್ತಿದೆ ಎಂದರು.

ಮಂಗಳವಾರ ಮಂಗಳೂರು ವಿವಿಗೆ 20 ಕೋಟಿ ರೂ. ಸಂಶೋಧನಾ ನೆರವು ಹಸ್ತಾಂತರಿಸಲಾಗಿದೆ. ಮನಮೋಹನ್ ಸಿಂಗ್ ಆಡಳಿತದ ಐದು ವರ್ಷಗಳಲ್ಲಿ ದಕ್ಷಿಣ ಕನ್ನಡ ಜಿಲ್ಲೆಗೆ 4500 ಕೋಟಿ ರೂ. ಅನುದಾನ ಬಂದಿದ್ದರೆ, ಮೋದಿ ಆಡಳಿತದ ಹತ್ತು ವರ್ಷಗಳಲ್ಲಿ 79,000 ಕೋಟಿ ರೂ. ಅನುದಾನ ಒದಗಿಸಲಾಗಿದೆ. ಎನ್‌ಐಟಿಕೆಗೆ 588 ಕೋಟಿ ರೂ. ನೆರವು ಒದಗಿಸಲಾಗಿದೆ ಎಂದರು.

ಎನ್‌ಐಟಿಕೆ ನಿರ್ದೇಶಕ ಪ್ರೊ.ಬಿ.ರವಿ ಅಧ್ಯಕ್ಷತೆ ವಹಿಸಿದ್ದರು. ವಿಧಾನ ಪರಿಷತ್ ಮಾಜಿ ಸದಸ್ಯ ಕ್ಯಾ.ಗಣೇಶ್ ಕಾರ್ಣಿಕ್, ಪಾಲಿಕೆ ಸದಸ್ಯರಾದ ಶೋಭಾ ರಾಜೇಶ್, ಶ್ವೇತಾ ಎ. ಪೂಜಾರಿ, ಡೀನ್‌ಗಳು, ವಿಭಾಗ ಮುಖ್ಯಸ್ಥರು, ಸಿಬ್ಬಂದಿ ವರ್ಗ ಉಪಸ್ಥಿತರಿದ್ದರು.

ವಿದ್ಯಾರ್ಥಿ ಕ್ಷೇಮಪಾಲನೆ ವಿಭಾಗ ಡೀನ್ ಪ್ರೊ.ಚಿತ್ತರಂಜನ್ ಹೆಗ್ಡೆ ಪ್ರಸ್ತಾವಿಸಿದರು. ಹಾಸ್ಟೆಲ್ ವಿಭಾಗ ಡೀನ್ ಪುಷ್ಪರಾಜ್ ಶೆಟ್ಟಿ ವಂದಿಸಿದರು.



**ಪ್ರಧಾನಿ ಮೋದಿ ವಿಕಸಿತ್ ಭಾರತ್ ಕಾರ್ಯಕ್ರಮದ ವರ್ಚುವಲ್ ವೀಕ್ಷಣೆ ಸಮಾರಂಭ ಎನ್‌ಐಟಿಕೆಯಲ್ಲಿ ನಡೆಯಿತು.**

Vijaya Karnataka, Date: 21/02/24, p. no -02